# ಸ್ವಾಮಿ ವಿವೇಕಾನಂದರ ಚಿಂತನೆಗಳ ಪ್ರಸ್ತುತತೆ

ಎಸ್.ಆರ್. ರಾಮಸ್ವಾಮಿ



## ಪುನರುತ್ಥಾನ ಪರ್ವ

ಭಾರತದ ಇತ್ತೀಚಿನ ಪುನರುತ್ಥಾನ ಪರ್ವ ಹದಿನೆಂಟನೇ ಶತಮಾನದ ಅಂತ್ಯದಲ್ಲಿ ಆರಂಭಗೊಂಡಿತು. ಗ್ರೀಕ್ ಮತ್ತು ರೋಮನ್ ನಾಗರಿಕತೆಗಳ ವೈಭವದ ಪುನರವತರಣಕ್ಕಾಗಿ, ಯೂರೋಪಿನಲ್ಲಿ ಹದಿನಾಲ್ಕನೇ ಶತಮಾನದಿಂದ ಆರಂಭಗೊಂಡು, ಸುಮಾರು ಮುನ್ನೂರು ವರ್ಷಕಾಲ ನಡೆದ ಪುನರುತ್ಥಾನ ಪ್ರಯತ್ನಸರಣಿ, ಬಹುಮಟ್ಟಿಗೆ ಕಲೆ–ಸಾಹಿತ್ಯ ಕ್ಷೇತ್ರಗಳಲ್ಲಿ ನಡೆದಿತ್ತು. ಭಾರತದಲ್ಲಿ ನಡೆದ ಪುನರುತ್ಥಾನವಾದರೋ ಧಾರ್ಮಿಕತೆಯೂ ಸೇರಿದಂತೆ ಎಲ್ಲ ಕ್ಷೇತ್ರಗಳನ್ನೂ ವ್ಯಾಪಿಸಿ ಇತಿಹಾಸದ ನವಯುಗವೊಂದನ್ನೇ ನಿರ್ಮಿಸಿದೆ. ಈ ನವನಿರ್ಮಾಣ ಸರಣಿಯ ಪ್ರಮುಖರು ರಾಜಾ ರಾಮಮೋಹನ ರಾಯ್, ಶ್ರೀರಾಮಕೃಷ್ಣ ಪರಮಹಂಸರು, ಸ್ವಾಮಿ ವಿವೇಕಾನಂದರು, ಸ್ವಾಮಿ ದಯಾನಂದ ಸರಸ್ವತಿ, ಶ್ರೀಅರವಿಂದರು ಮೊದಲಾದವರು. ಈ ಶ್ರೇಣಿಯಲ್ಲಿ ಅತ್ಯಂತ ದೂರಗಾಮಿ ಪ್ರಭಾವ ಬೀರಿದವರೆಂದರೆ ಸ್ವಾಮಿ ವಿವೇಕಾನಂದರು. ತಮ್ಮ ಸರ್ವಸ್ಪರ್ಶಿ ಅಭಿಯಾನದಿಂದ ಅವರು ಎರಡು ಗುರಿಗಳನ್ನು ಏಕಕಾಲದಲ್ಲಿ ಸಾಧಿಸಿದರು: **ಹಲವಾರು ಮಾನಸಿಕ ವಿಕೃತಿಗಳ ಮತ್ತು ದೌರ್ಬಲ್ಯಗಳ ನಿರಸನ ಮತ್ತು ಸಮಾಜದಲ್ಲಿ ಯುಗಾನುಕೂಲ ಪರಿವರ್ತನೆಗೆ ಬೇಕಾದ ಹೊಸ ಚೇತರಿಕೆಯ ನಿರ್ಮಾಣ**.

> ಮಾನ್ಯ ಲೇಖಕರು ಕನ್ನಡದ ಪ್ರತಿಷ್ಠಿತ ಪತ್ರಿಕೆ 'ಉತ್ಥಾನ'ದ ಸಂಪಾದಕರು. ದೇಶೀಯ ಮತ್ತು ಅಂತರರಾಷ್ಟ್ರೀಯ ಆರ್ಥಿಕ, ಸಾಮಾಜಿಕ ಪರಿಸ್ಥಿತಿ, ಭಾರತೀಯ ಜೀವನಮೌಲ್ಯಗಳ ಪ್ರಸ್ತುತತೆ – ಈ ವಿಚಾರಗಳಲ್ಲಿ ಆಳವಾದ ಆಲೋಚನೆ ಮಾಡಿ, ಅನೇಕ ಬರಹಗಳು, ಪುಸ್ತಕಗಳನ್ನು ಬರೆದಿರುವ ಹಿರಿಯ ಚಿಂತಕರು.

ಸ್ವಾಮಿ ವಿವೇಕಾನಂದರ ಸಮಯದಲ್ಲಿಯೂ, ನೂರು ವರ್ಷ ಕಳೆದ ಮೇಲಿನ ಇಂದಿನ ಕಾಲದಲ್ಲಿಯೂ, ಎದ್ದುಕಾಣುವ ಸಂಗತಿಯೆಂದರೆ – ಬಾಹ್ಯ ಪ್ರಗತಿ ಒಂದಷ್ಟುಮಟ್ಟಿಗೆ ಆಗಿದ್ದರೂ ಆಂತರಿಕ ವಿಕಾಸ ಅಪೇಕ್ಷಿತ ಮಟ್ಟದಲ್ಲಿ ಆಗಿಲ್ಲ ಎನ್ನುವುದು. 'ಪ್ರಜೆ' ಮುನ್ನಡೆದಿದ್ದಾನೆ, ಆದರೆ 'ವ್ಯಕ್ತಿ' ಸ್ಥಗಿತಗೊಂಡಿದ್ದಾನೆ. ಇದಕ್ಕೆ ಒಂದು ಕಾರಣ **ಆದ್ಯತೆಯ ನಿರ್ಣಯದಲ್ಲಿನ ಅಸಮಗ್ರತೆ**. ಇನ್ನೊಂದು ಕಾರಣ **ಅಭ್ಯುದಯಕ್ಕೆ ಇರುವ ಸಾಮೂಹಿಕ ಆಯಾಮವನ್ನು ಅಲಕ್ಷಿಸಿರುವುದು**. ಈ ನ್ಯೂನತೆಗಳನ್ನು ಅತ್ಯಂತ ಸ್ಪಷ್ಟವಾಗಿ ಗುರುತಿಸಿದವರು ಸ್ವಾಮಿ ವಿವೇಕಾನಂದರು ಮತ್ತು ಇದಕ್ಕೆ ಪರಿಹಾರರೂಪವಾಗಿಯೆ ಅವರು 'ಅನುಷ್ಠಾನ ವೇದಾಂತ' ವೆಂಬ ಕಲ್ಪನೆಯನ್ನು ಆವಿಷ್ಕರಿಸಿದರು. ಶ್ರುತಿಸ್ಮೃತಿಗಳ ಪರಂಪರೆಯೂ, ಶಾಸ್ತ್ರವಾಙ್ಮಯವೂ ಅತ್ಯುದಾತ್ತ ಭಾವನೆಗಳಿಂದ ತುಂಬಿವೆಯಾದರೂ, ಅವುಗಳ ಇಂದಿನ ವಾರಸುದಾರರಲ್ಲಿ ಬಹುತೇಕ ವರ್ಗದವರ ಬಾಳು ಬರಡಾಗಿದೆ. ಈ ಅಂತರವನ್ನು ಕಡಿಮೆಗೊಳಿಸಲು ಪರಿಶ್ರಮಿಸಿದವರು ಸ್ವಾಮಿ ವಿವೇಕಾನಂದರು. ಅಭಿವೃದ್ಧಿಯು ಎಲ್ಲರನ್ನೂ ತಲಪಬೇಕೆಂದು ಸಮಾಜವಾದಿಗಳೂ, ಸಾಮ್ಯವಾದಿಗಳೂ ಹೇಳಿದುದರಲ್ಲಿ ಹೊಸದೇನಿಲ್ಲ; ಎಲ್ಲರ ಅಂತರಂಗದಲ್ಲಿರುವುದು ಒಂದೇ ಆತ್ಮವೇ ಎಂದು ಉಪನಿಷತ್ತುಗಳೇ ಸಾರಿವೆ. ಕೊರತೆಯುಂಟಾಗಿರುವುದು ಈ ಬಗೆಯ ಉದಾತ್ತ ಆಧಾರಭೂತ ಕಲ್ಪನೆಗಳ ಕ್ರಿಯಾನ್ವಯದಲ್ಲಿ. ಐತಿಹಾಸಿಕ ಸನ್ನಿವೇಶಗಳ ಪಾತ್ರವೂ ಇದರಲ್ಲಿದೆ.

ಎಲ್ಲ ಬಗೆಯ ಪ್ರಗತಿಗೂ ಸಮುಚಿತ ಭೂಮಿಕೆಯನ್ನು ನಿರ್ಮಿಸಬಲ್ಲದ್ದು 'ಧಾರ್ಮಿಕತೆ' ಮಾತ್ರ ಎಂಬುದು ಸ್ವಾಮಿ ವಿವೇಕಾನಂದರ ವಿಶ್ಲೇಷಣೆ:

"ನಮ್ಮ ಏಕಮಾತ್ರ ಸಮಾನ ಭೂಮಿಕೆಯೆಂದರೆ ಹಿಂದಿನಿಂದ ಬಂದ ಪವಿತ್ರ ಪರಂಪರೆ ಮತ್ತು ಧರ್ಮ. ಅದೊಂದೇ ಏಕಮಾತ್ರ ಸಾಧಾರಣ ಭೂಮಿಕೆ. ಅದರ ಮೇಲೆ ಮಾತ್ರ ನಮ್ಮ ರಾಷ್ಟ್ರವನ್ನು ನಿರ್ಮಿಸುವುದು ಸಾಧ್ಯ. ಯುರೋಪಿನಲ್ಲಿ ರಾಜನೀತಿಯ ಭಾವನೆ ಜನಾಂಗದ ಏಕತೆಗೆ ಕಾರಣ. ಏಷ್ಯಾ ಖಂಡದಲ್ಲಿ

"ಧಾರ್ಮಿಕತೆ, ಸಂಸ್ಕೃತಿ, ಆರ್ಥಿಕತೆ, ಸಮಾಜ ಅಧ್ಯಯನ – ಈ ಎಲ್ಲ ಕ್ಷೇತ್ರಗಳಿಗೂ ದಿಗ್ದರ್ಶನ ಮಾಡಿದ ರಾಷ್ಟ್ರ ನಾಯಕರೆಂದು ಸ್ವಾಮಿ ವಿವೇಕಾನಂದರನ್ನು ನಾನು ಪರಿಗಣಿಸುತ್ತೇನೆ. ಸನಾತನವೂ ಅತ್ಯಂತ ವಿಚಾರಶುದ್ಧವೂ ವೈಜ್ಞಾನಿಕವೂ ಆದ ವೇದಾಂತದಿಂದ ಎಲ್ಲ ಜೀವನಕ್ಷೇತ್ರಗಳೂ ಅನುಪ್ರಣೀತವಾಗಬೇಕಾಗಿದೆ. ದೇಶದ ಪರಂಪರೆಯ ಬುನಾದಿಯನ್ನೇ ಮರೆತಲ್ಲಿ ಭಾರತವು ಭಾರತವಾಗಿ ಉಳಿಯುವುದಿಲ್ಲ...ಇಂದು ಮುನ್ನೆಲೆಯಲ್ಲಿರುವ ನಮ್ಮೆಲ್ಲ ಸಮಸ್ಯೆಗಳಿಗೆ ಪರಿಹಾರವನ್ನು ಅರಸುವಲ್ಲಿ ಧಾರ್ಮಿಕ ಜಾಗರೂಕತೆಯ ಮಹತ್ತ್ವವನ್ನು ಅಲಕ್ಷಿಸಬಾರದೆಂಬ ಸ್ವಾಮಿ ವಿವೇಕಾನಂದರ ದಿಗ್ದರ್ಶನವನ್ನು ತಲಸ್ಪರ್ಶಿಯಾಗಿ ನಾವು ಅರಿತುಕೊಳ್ಳಬೇಕಾಗಿದೆ."

**–ಲೋಕನಾಯಕ ಜಯಪ್ರಕಾಶ ನಾರಾಯಣ್**

ಧಾರ್ಮಿಕ ಆದರ್ಶಗಳು ಜನಾಂಗದ ಏಕತೆಗೆ ಮೂಲ. ಭವಿಷ್ಯ ಭಾರತದ ಸಂಘಟನೆಗೆ ಧಾರ್ಮಿಕ ಏಕತೆ ಮೊದಲನೆಯ ಆವಶ್ಯಕತೆ. ಭರತಖಂಡದಾದ್ಯಂತ ನಾವು ಒಂದು ಧರ್ಮವನ್ನು ಒಪ್ಪಿಕೊಳ್ಳಬೇಕು."

(ಮದರಾಸ್ ಉಪನ್ಯಾಸ, ಕೃತಿಶ್ರೇಣಿ, ಸಂ. ೩, ಪುಟ ೧೬೦)

## ಹೊಸ ವಾಣಿ

ಬೇರೆ ಬೇರೆ ಕ್ಷೇತ್ರಗಳಲ್ಲಿ ಸ್ವಾಮಿ ವಿವೇಕಾನಂದರ ದೂರಗಾಮಿ ಚಿಂತನೆಗಳು ಪ್ರತಿಫಲಿತವಾಗಿರುವುದನ್ನು ಗುರುತಿಸುವುದು ಕಷ್ಟವಲ್ಲ. ಆದರೆ ಸ್ವಾಮೀಜಿಯವರ ಎಲ್ಲ ಚಿಂತನೆಯಲ್ಲೂ ಅಂತರ್ವಾಹಿನಿಯಾಗಿರುವ ಸಂರಚನೆಯೆಂದರೆ ಭಾರತದ ಸನಾತನ ಅಧ್ಯಾತ್ಮಜ್ಞಾನಕ್ಕೆ ಹೊಸ ವಾಣಿಯನ್ನು ನೀಡಿದುದು, ಸಾರ್ವಕಾಲಿಕ ವೇದಾಂತವನ್ನು ತಮ್ಮ ಸ್ವಂತ ಅನುಭವಾಧಾರಿತ ಚಿಂತನೆ–ನಿರೂಪಣೆಗಳಿಗೆ ಮಾಧ್ಯಮವನ್ನಾಗಿಸಿಕೊಂಡದ್ದು. ಇದು ಯುಕ್ತಿಸಮ್ಮತವೂ ಆಗಿದೆ. ಅಧ್ಯಾತ್ಮಮಾರ್ಗವಾಗಲಿ ಮತ್ತು ಅದರ ಬೋಧನೆಯಾಗಲಿ ಯಾವುದೋ ಗತಕಾಲಕ್ಕಷ್ಟೆ ಸಂಬಂಧಿಸಿದ ಪ್ರಕ್ರಿಯೆಗಳಾಗಿದ್ದಿದ್ದರೆ ಅವುಗಳ ಯಾಂತ್ರಿಕ ಮರುಚಿಂತನೆಗೆ ಮಹತ್ತ್ವವೇನೂ ಇರುತ್ತಿರಲಿಲ್ಲ. ವೇದಾಂತದ ಚಿರಂತನತೆಯೂ ಸಾಮರ್ಥ್ಯವೂ ಆಧುನಿಕ ಮಾನಸಿಕತೆಗೆ ಪರಿಸ್ಫುಟಗೊಳ್ಳುವಂತೆ ಅದನ್ನು ಪುನರ್ನಿರೂಪಿಸಿದುದು ಸ್ವಾಮಿ ವಿವೇಕಾನಂದರ ವಿಶಿಷ್ಟ ಸಾಧನೆ. ಅವರ ವಾಣಿಗೆ ಜಗತ್ತೆಲ್ಲ ಸ್ಪಂದಿಸಿದುದು ಈ ಕಾರಣದಿಂದಲೇ. ಸನಾತನಧರ್ಮದ ಉಜ್ಜ್ವಲತೆಯನ್ನು ಕೇವಲ ಗತಾನುಗತಿಕ ಎಂದು ಸ್ವೀಕರಿಸದೆ ಮನನ, ನಿದಿಧ್ಯಾಸನಗಳಿಂದ ಅವರು ಅಂತರ್ಗತ ಮಾಡಿಕೊಂಡಿದ್ದುದರಿಂದಲೇ, ಅವರ ವಾಣಿಯು ಓಜಸ್ವಿಯೂ ಆಕರ್ಷಕವೂ ಆಗಿತ್ತು.

ಸ್ವಾಮೀಜಿಯವರು ಮಾನವತೆಗೆ ಹೊಸ ದಾರಿ ತೋರಿದರಷ್ಟೆ ಅಲ್ಲ, ಮಾನವ ಪ್ರಗತಿಗೆ ಬಾಧಕಗಳಾಗಿದ್ದ ಸನ್ನಿವೇಶಗಳ ನಿವಾರಣೆಯ ಮಾರ್ಗಗಳನ್ನೂ ಬೋಧಿಸಿದರು. ಅವರ ಚಿಂತನೆ ಸದಾ **ಆದರ್ಶ, ವ್ಯವಹಾರ್ಯತೆ** – ಈ ಇಗ್ಗಾಲಿಗಳ ಮೇಲೆ ನಡೆಯಿತು. ಪ್ರತಿಯೊಂದು ಆತ್ಮವೂ ಮೂಲಸ್ವರೂಪದಲ್ಲಿ ಪವಿತ್ರವಾದದ್ದು; ಸುಪ್ತವಾಗಿರುವ ಆ ಪವಿತ್ರತೆಯನ್ನು ಜಾಗೃತಗೊಳಿಸಬೇಕಾದುದೇ ಈಗಿನ ಯುಗಧರ್ಮ ಎಂಬುದು ಸ್ವಾಮೀಜಿಯವರ ಕಾಣ್ಕೆ.

ತಮ್ಮ ಕಲ್ಪನೆಯ ಅನುಷ್ಠಾನ ವೇದಾಂತದ ಸಾರವನ್ನು ಸ್ವಾಮೀಜಿ ಹಲವಾರು ಕಡೆಗಳಲ್ಲಿ ಸ್ಪಷ್ಟಪಡಿಸಿದ್ದಾರೆ. ಒಂದು ಉಲ್ಲೇಖ ಇಲ್ಲಿ ಸಾಕಾದೀತು:

"ಸಾಕ್ಷಾತ್ಕಾರವೇ ನಿಜವಾದ ಧರ್ಮ. ಉಳಿದುವೆಲ್ಲ ಇದಕ್ಕೆ ಸಿದ್ಧತೆಗಳು. ಉಪನ್ಯಾಸ ಕೇಳುವುದು, ಪುಸ್ತಕ ಓದುವುದು ಅಥವಾ ವಿಚಾರ ಮಾಡುವುದು – ಇವುಗಳೆಲ್ಲ ಕೇವಲ ಸಿದ್ಧತೆ ಮಾತ್ರ; ಇವೇ ಧರ್ಮವಲ್ಲ. ಬೌದ್ಧಿಕ ಆರೋಹಣ–ಅವರೋಹಣ ಧರ್ಮವಲ್ಲ. ಹೇಗೆ ನಾವು ಇಂದ್ರಿಯಕ್ಕೆ ಸಂಬಂಧಪಟ್ಟ ವಸ್ತುವಿನ ಪ್ರತ್ಯಕ್ಷ ಅನುಭವವನ್ನು ಪಡೆಯಬಹುದೋ, ಅದರಂತೆಯೇ, ಅದಕ್ಕಿಂತ ಹೆಚ್ಚಾಗಿ ನಾವು ಆಧ್ಯಾತ್ಮಿಕ ಸತ್ಯವನ್ನೂ ಗ್ರಹಿಸಬಹುದೆಂಬುದೇ ಯೋಗಿಗಳ ಮುಖ್ಯ ಅಭಿಪ್ರಾಯ... ಮಾನವನಿಗೆ ತನ್ನ ಯುಕ್ತಿಯನ್ನು ಮೀರಿ ಹೋಗಬಲ್ಲ ಶಕ್ತಿ ಇದೆ. ಈ ಶಕ್ತಿ ಪ್ರತಿಯೊಬ್ಬ ಮಾನವನಲ್ಲಿಯೂ ಇದೆ... ಯೋಗಾಭ್ಯಾಸದಿಂದ ಈ ಶಕ್ತಿ ಜಾಗೃತವಾಗುತ್ತದೆ."

('ರಾಜಯೋಗ', ಕೃತಿಶ್ರೇಣಿ ಸಂ. ೨, ಪುಟ ೪೯–೫೦)

## ಯುಗಾನುಕೂಲ ದೃಷ್ಟಿ

ಸ್ವಾಮಿ ವಿವೇಕಾನಂದರು ತಮ್ಮ ಸುದೀರ್ಘ ಮಂಥನದಿಂದ ಬೆಳೆಸಿಕೊಂಡ ಈ ಕೆಳಗಿನ ಒಳನೋಟಗಳು ಅವರ ಅನುಷ್ಠಾನ ವೇದಾಂತದ ಅಡಿಪಾಯಗಳಾದುವು:

**೧. ಅತಿಸಾಮಾನ್ಯ ಜನಕೋಟಿಯ ಹಿತವನ್ನು ಅಲಕ್ಷಿಸಿದುದೇ ಭಾರತದ ಅವನತಿಗೆ ಕಾರಣ.**

**೨. ಹಿಂದೆಯೂ ಇಂದೂ ಮುಂದೂ ಧಾರ್ಮಿಕತೆಯೇ ಭಾರತೀಯ ನಾಗರಿಕತೆಯ ಒಳದನಿಯಾಗಿದೆ.**

**೩. ರಾಷ್ಟ್ರೀಯ ಹಾಗೂ ಸಾಮಾಜಿಕ ಸಮಸ್ಯೆಗಳು ಉಲ್ಬಣಿಸಿರುವುದು ಹಿಂದೂಧರ್ಮದ ಕಾರಣದಿಂದಲ್ಲ; ಬದಲಿಗೆ ವೇದಾಂತ ತತ್ತ್ವಗಳನ್ನು ಜೀವನಕ್ಕೆ ಅನ್ವಯಿಸದೆ ಮರೆತುದರಿಂದಾಗಿ.**

ಸ್ವಾಮೀಜಿ ಪ್ರತಿಪಾದಿಸಿದ ಅನುಷ್ಠಾನ ವೇದಾಂತದ ಸ್ಥೂಲಾಂಶಗಳು ಇವು:

**೧. ಧರ್ಮದ ಮತ್ತು ಆಧ್ಯಾತ್ಮಿಕತೆಯ ಹೊಸ ಲಕ್ಷಣನಿರೂಪಣೆ**

**೨. ಹೊಸ ವ್ಯಾವಹಾರಿಕ ಜೀವನಪ್ರಣಾಳಿ**

**೩. ಶ್ರಮದ ಮಹತ್ತ್ವ, ಕಾರ್ಯದಕ್ಷತೆ**

**೪. ದೀನರ ಏಳ್ಗೆಗೆ ಪ್ರಾಶಸ್ತ್ಯ**

### ೫. ಸಾಮರಸ್ಯ ಸಾಧನೆ

### ೬. ಭಾರತದ ರಾಷ್ಟ್ರೀಯ ಧ್ಯೇಯಸಾಧನೆಗೆ ಹೊಸ ತಾತ್ತ್ವಿಕ ಆಧಾರ

ಸ್ವಾಮಿ ವಿವೇಕಾನಂದರ ಈ ಹೊಸ ದೃಷ್ಟಿ ಧಾರ್ಮಿಕ ಮತ್ತು ಆಧ್ಯಾತ್ಮಿಕ ಕ್ಷೇತ್ರಗಳಿಗಷ್ಟೆ ಸೀಮಿತವಾಗಿರಲಿಲ್ಲ. ಅವರು ಮುಖ್ಯವೆಂದು ಪರಿಗಣಿಸಿ ಮೇಲಿಂದ ಮೇಲೆ ವ್ಯಾಖ್ಯಾನ ಮಾಡಿದ ಎಲ್ಲ ವಿಷಯಗಳಲ್ಲಿಯೂ ಅವರದು ಭಿನ್ನವೂ ಸ್ವೋಪಜ್ಞವೂ ಆದ ದೃಷ್ಟಿಯೇ ಆಗಿತ್ತು.

### ವಿಜ್ಞಾನ–ಅಧ್ಯಾತ್ಮಗಳ ಅಪೂರ್ವ ಮಿಲನ

ಉದಾಹರಣೆಗೆ, ಇದೀಗ ಶತಮಾನೋತ್ಸವ ಆಚರಿಸುತ್ತಿರುವ ಜಗದ್ವಿಖ್ಯಾತವಾದ, ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಸಂಸ್ಥೆಯನ್ನು ಸ್ಥಾಪಿಸುವಂತೆ ಜೆಮ್‌ಷೆಡ್‌ಜೀ ಟಾಟಾ ಅವರನ್ನು ಪ್ರೇರಿಸಿ ಆಗ್ರಹಿಸಿದವರು ಸ್ವಾಮಿ ವಿವೇಕಾನಂದರು ಎಂಬ ಸಂಗತಿ ಸುವಿದಿತ. ೧೮೯೩, ಜೂನ್–ಜುಲೈ ತಿಂಗಳಲ್ಲಿ 'ಎಂಪ್ರೆಸ್ ಆಫ್ ಇಂಡಿಯ' ಹಡಗಿನಲ್ಲಿ ಜಪಾನಿನಿಂದ ಕೆನಡಾಕ್ಕೆ ಪಯಣಿಸುತ್ತಿದ್ದಾಗ, ಟಾಟಾ ಅವರ ಮನಸ್ಸಿನಲ್ಲಿ ಅತ್ಯುನ್ನತ ಮಟ್ಟದ ವಿಜ್ಞಾನಮಂದಿರವೊಂದರ ಸ್ಥಾಪನೆಯ ಸಂಕಲ್ಪವನ್ನು ಬಿತ್ತಿದವರು ಸ್ವಾಮಿ ವಿವೇಕಾನಂದರೆ. ಇಂಥ ದೊಡ್ಡ ಯೋಜನೆಗೆ ಅನುಕೂಲಕರವಾದ ಸನ್ನಿವೇಶ ಆಗ ಇರಲಿಲ್ಲ. ಹಾಗಾಗಿ ಅದಕ್ಕೆ ಅನೇಕ ಅಡ್ಡಿಗಳು ಒದಗಿದವು. ಆಗಿನ ವೈಸರಾಯ್ ಲಾರ್ಡ್ ಕರ್ಜನನೇ ಈ ಯೋಜನೆ ಅವ್ಯವಹಾರ್ಯ ಎಂಬ ನಿಲುವು ತಳೆದ. ಟಾಟಾ ಅವರ ಕೋರಿಕೆಯಂತೆ ವರದಿಯನ್ನು ಸಿದ್ಧಪಡಿಸಿದ ಪ್ರತಿಷ್ಠಿತ ರಸಾಯನಶಾಸ್ತ್ರಜ್ಞ ಸರ್ ವಿಲಿಯಂ ರ್‍ಯಾಮ್ಸೇ ನೀಡಿದ ಅಭಿಪ್ರಾಯವೂ ಈ ಯೋಜನೆಗೆ ಪೋಷಕವಾಗಿರಲಿಲ್ಲ. ಈ ಎಲ್ಲ ಸಮಸ್ಯೆಗಳೂ ಕಾಲಕ್ರಮದಲ್ಲಿ ನಿವಾರಣೆಗೊಂಡು, ಟಾಟಾ ವಿಜ್ಞಾನಮಂದಿರವು ಸ್ಥಾಪನೆಯಾಗಿ, ೧೯೦೯– ೧೧ ರಲ್ಲಿ ಕಾರ್ಯಾರಂಭ ಮಾಡಿದುದು ಈಗ ಇತಿಹಾಸ.

ಇಲ್ಲಿ ಗಮನಿಸಬೇಕಾದ ಇನ್ನೊಂದು ಅಂಶವುಂಟು. ಹತ್ತೊಂಬತ್ತನೇ ಶತಮಾನದ ಅಂತ್ಯದಲ್ಲಿ ಹಾಗೂ ಇಪ್ಪತ್ತನೇ ಶತಮಾನದ ಆರಂಭದಲ್ಲಿ ಒಂದು ಅತ್ಯಂತ ಪ್ರಖರ ವಿವಾದ ತಲೆಯೆತ್ತಿತ್ತು. ಆಧುನಿಕ ವಿಜ್ಞಾನದ ಮುನ್ನಡೆಯಿಂದಾಗಿ ಭೌತವಾದವೂ ನಾಸ್ತಿಕತೆಯೂ ಹರಡುತ್ತದೆ ಎಂಬ ಭಾವನೆ, ಯುರೋಪಿನಲ್ಲಿಯೂ ಭಾರತದಲ್ಲಿಯೂ ತೀವ್ರಚಾಲನೆಯನ್ನು ಪಡೆದುಕೊಂಡು, ಭಾರಿ ವೈಚಾರಿಕ ಸಂಘರ್ಷಕ್ಕೆ ಎಡೆಮಾಡಿತ್ತು. ವಿಜ್ಞಾನ ಮತ್ತು ಧರ್ಮಗಳು ಪರಸ್ಪರ ವಿರೋಧಿಗಳೆಂಬ ಧೋರಣೆ ಎಲ್ಲೆಡೆ ಹರಡಿತ್ತು. ಇಂಥ ಜಾಗತಿಕ ಸನ್ನಿವೇಶದಲ್ಲಿ ಅಧ್ಯಾತ್ಮದ ತವರಾದ ಭಾರತವು ಆಧುನಿಕ ವೈಜ್ಞಾನಿಕ ಕ್ಷೇತ್ರದಲ್ಲಿಯೂ ಪ್ರಗತಿಯನ್ನು ಸಾಧಿಸಲೇಬೇಕೆಂದು ಆಗ್ರಹಿಸಿದವರು ಸ್ವಾಮಿ ವಿವೇಕಾನಂದರು! ಸ್ವಾಮೀಜಿಯವರ ದೃಷ್ಟಿ ಎಷ್ಟು ಪ್ರಬುದ್ಧವೂ, ಪ್ರಗತಿಪರವೂ ಆಗಿತ್ತೆನ್ನಲು ಇದು ಒಂದು ನಿದರ್ಶನ ಮಾತ್ರ. ಸ್ವಾಮೀಜಿಯವರ ಚಿಂತನಾಪ್ರಣಾಳಿಯನ್ನು ವೈಶಿಷ್ಟ್ಯಮಯವಾಗಿಸಿದುದು ಇಂಥ ದೂರದೃಷ್ಟಿಯೇ.

ಪ್ರತ್ಯೇಕವೂ ಪರಸ್ಪರ ವಿರುದ್ಧವೂ ಎಂಬಂತೆ ಸ್ವತಂತ್ರ ದಾರಿಗಳಲ್ಲಿ ನಡೆಯುತ್ತಿದ್ದ ಭೌತವಿಜ್ಞಾನವನ್ನೂ, ತತ್ತ್ವಶಾಸ್ತ್ರವನ್ನೂ ಒಂದಕ್ಕೊಂದು ಅಭಿಮುಖವಾಗಿಸಿದವರು ಸ್ವಾಮಿ ವಿವೇಕಾನಂದರು. ೧೮೯೬ ರಲ್ಲಿ ಲಂಡನ್ನಿನ ಭಾಷಣವೊಂದರಲ್ಲಿ ಸ್ವಾಮೀಜಿ ಹೇಳಿದ ಮಾತು ಇದು: "ದೇಶ–ಕಾಲ–ಕಾರಕತ್ವಗಳ ಮೂಲಕ ಹಾದು ದೃಗ್ಗೋಚರ ವಿಶ್ವವಾಗಿ ಹೊಮ್ಮಿರುವುದು ಪರತತ್ತ್ವವೇ; ಅದ್ವೈತ ದರ್ಶನದ ಕೇಂದ್ರತತ್ತ್ವವಾದರೂ ಇದೇ."

"ನಮ್ಮ ಹೊರಗಣ್ಣಿಗೆ ಏನು ಹೇಗೆ ಕಾಣುತ್ತದೆಂಬುದನ್ನು ನಿರ್ಣಯಿಸುವುದು ನಮ್ಮ ಅಂತರ್ಮಥನ" ಎಂಬ ಐನ್‌ಸ್ಟೈನನ ಮಾತೂ, "ದೇಶ–ಕಾಲಗಳೊಳಗಿನ ಪ್ರಕ್ರಿಯೆಗಳು ಬಾಹ್ಯರೂಪದವು ಎಂಬ ಭಾವನೆಯಿಂದ ನಾವು [ವಿಜ್ಞಾನಿಗಳು] ದೂರ ಸರಿಯಬೇಕಾಗಿದೆ" ಎಂಬ ಹೈಸೆನ್‌ಬರ್ಗನ ಮಾರ್ಮಿಕ ಹೇಳಿಕೆಯೂ ಸ್ವಾಮೀಜಿಯವರ ಚಿಂತನೆಯನ್ನೇ ಪ್ರತಿಫಲಿಸಿವೆ. ಕೇಂಬ್ರಿಜ್‌ನ ಪ್ರಸಿದ್ಧ ಗಣಿತಶಾಸ್ತ್ರಜ್ಞನೂ ಖಗೋಳಶಾಸ್ತ್ರಜ್ಞನೂ ಆದ ಸ್ಟೀಫನ್ ಹಾಕಿಂಗ್‌ನನ್ನು ಕುರಿತು ಹಾರ್ವರ್ಡಿನ ಭೌತವಿಜ್ಞಾನಿ ವಿಲಿಯಂ ಪ್ರೆಸ್ ಹೀಗೆಂದಿದ್ದಾರೆ: "ಶುಷ್ಕ ಗೌಣ ಅಂಶಗಳ ಲೆಕ್ಕಾಚಾರಗಳನ್ನು ಮೀರಿ, ನೇರವಾಗಿ ಫಲಿತಾಂಶಗಳತ್ತ ನೆಗೆಯುವುದೇ ಸ್ಟೀಫನನ ಪ್ರತಿಭಾವಂತಿಕೆ."

(ಮುಂದುವರಿಯುವುದು)

### ಸ್ವಾಮಿ ವಿವೇಕಾನಂದರ ಬಗ್ಗೆ ನಿಮಗೆಷ್ಟು ಗೊತ್ತು?

ಅವರು ವಿದೇಶ ಪ್ರಯಾಣ ಮಾಡಿದುದು – ೨ ಬಾರಿ.

(೧೮೯೩ ರಿಂದ ೧೮೯೬ ಡಿಸೆಂಬರ್‌ವರೆಗೆ ಮೊದಲ ಬಾರಿ. ೧೮೯೯ ಜೂನ್ ನಿಂದ ೧೯೦೦ ನವಂಬರ್‌ವರೆಗೆ – ಒಟ್ಟು ೫ ವರ್ಷಗಳು.)

ಅವರು ಒಟ್ಟು ಪ್ರಯಾಣ ಮಾಡಿರುವ ದೂರ – ೧೭, ೩೯೬ ಕಿ.ಮೀ.

ಅವರು ಒಟ್ಟು ಕೊಟ್ಟಿರುವ ಪ್ರವಚನಗಳು – ೩೧೭

ಅವರು ತೆಗೆದುಕೊಂಡ ತರಗತಿಗಳು (Class Talks) – – ೪೩೧

ಚರ್ಚಾಕೂಟಗಳು – ೫೬

ಅವರು ಬಾಳಿದುದು – ೩೯ ವರ್ಷಗಳು